ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಹಣ ಪಾವತಿ ಆಗಿಲ್ಲ ಎನ್ನತಕ್ಕಂಥಾದ್ದನ್ನು ಈಗ ತಾನೇ ಮಾನ್ಯ ಸದ್ಸಯರು ನನ್ನ ಹತ್ತಿರ ಬಂದು ಚರ್ಚೆ ಮಾಡಿದ್ದಾರೆ. ಜಿಲ್ಲಾಧಿಕಾರಿಗಳ ಜತೆ ವಿಚಾರ ಮಾಡಿ ಆ ಹಣವನ್ನು ಬಿಡುಗಡೆ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಈಗ ಹಣ ಬರುತ್ತಿಲ್ಲ. ಹೀಗಾಗಿ ಅನೇಕ ಅರ್ಜಿಗಳು ಪೆಂಡಿಂಗ್ ಇವೆ. ನಮಗೆ ಸಾಮಾನ್ಯ ಜನರಿಗೆ ಉತ್ತರ ಹೇಳುವುದೂ ಕೂಡ ಕಷ್ಟವಾಗಿದೆ. ಏಕೆಂದರೆ ಇಡೀ ರಾಜ್ಯದಲ್ಲಿ ಹಣ ಬಿಡುಗಡೆಯಾಗಿಲ್ಲ. ಮಾನ್ಯ ಮಂತ್ರಿಗಳು ಇದನ್ನು ಗಮನಿಸಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಸಭಾಧ್ಯಕ್ಷರೆ, ಈ ಯೋಜನೆಗೆ ಕೇಂದ್ರದಿಂದ ಹಣ ಬರಬೇಕು. ಕೇಂದ್ರದಿಂದ ಹಣ ಬಂದಿದ್ದರೆ, ಅದು ಒಂದು ಪಾವತಿ ಆಗದೇ ಇದ್ದರೆ ಆದಷ್ಟು ಜಾಗ್ರತೆ ರಾಜ್ಯದ ಎಲ್ಲಾ ಭಾಗಗಳಲ್ಲೂ ಪಾವತಿ ಮಾಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ವಿ. ಕೃಷ್ಣಪ್ಪ:- ಮಾನ್ಯ ಸಭಾಧ್ಯಕ್ಷರೇ, ನಮ್ಮ ತಾಲ್ಲೂಕಿನಲ್ಲಿ ಕೂಡ ಬೇಕಾದಷ್ಟು ಅರ್ಜಿಗಳು ಪೆಂಡಿಂಗ್ ಇವೆ. ವರ್ಷದಲ್ಲಿ ಒಂದೆರಡೂ ಕೂಡ ಸರಿಯಾಗಿ ವಿಲೇವಾರಿ ಆಗುವುದಿಲ್ಲ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಹಮ ಬಿಡುಗಡೆ ಮಾಡಿಸುವುದಕ್ಕೆ ಸ್ವಲ್ಪ ಶ್ರದ್ಧೆ ವಹಿಸಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ:- ಇದು ಎರಡು - ಮೂರು ವರ್ಷಗಳಿಂದ ಕೂಡ ಬಾಕಿ ಇದೆ. ನಮ್ಮ ಕ್ಷೇತ್ರದಲ್ಲಿ ಕೂಡ ಇನ್ನೂರು - ಮುನ್ನೂರು ಅರ್ಜಿಗಳಿವೆ ಮಂಜೂರಾತಿ ಆಗಿದೆ. ಆದರೆ ಹಣ ಕೊಟ್ಟಿಲ್ಲ. ಆದ್ದರಿಂದ ಆದಷ್ಟು ಶೀಘ್ರವಾಗಿ ತಾವು ನಿಮ್ಮ ಸರ್ಕಾರದ ನಿಧಿಯಿಂದ ಆದರೂ ಕೂಡ ಅವರಿಗೆ ಹಣ ಕೊಟ್ಟು ಪ್ರೋತ್ಸಾಹಿಸಬೇಕು. ಇಲ್ಲದಿದ್ದರೆ ಆ ಕುಟುಂಬಗಳು ಗತಿ ಇಲ್ಲದ ಹಾಗೆ ಆಗುತ್ತವೆ. ಇದರ ಬಗ್ಗೆ ಕೂಡಲೇ ಗಮನಹರಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೇ, ಏರ್ಪಾಡು ಮಾಡುತ್ತೇನೆ.

ಅಧ್ಯಕ್ಷರು:- ಮಾನ್ಯ ಡೊಂಗರಗಾಂವ್‌ರವರೇ, ನಿಮ್ಮ ಪ್ರಶ್ನೆಗೆ (982) ಸಮಯ ತೆಗೆದುಕೊಂಡಿದ್ದಾರೆ. ಅಂಕಿಅಂಶಗಳನ್ನು ತರಿಸಬೇಕೆಂದು ಹೇಳಿದ್ದಾರೆ. ನೋಡೋಣ, ಸಾಧ್ಯವಾದರೆ, ಮುಂದಿನ ವಾರ ತೆಗೆದುಕೊಳ್ಳೋಣ.

ಪ್ರಶ್ನೆ ಸಂಖ್ಯೆ: 89 (637) - ಮಾನ್ಯ ಸದಸ್ಯರಾದ ಶ್ರೀ ಬಿ.ಹೆಚ್. ಬನ್ನಿಕೋಡ್ ಅವರು ಗೈರುಹಾಜರಿದ್ದರು.

ರಾಜ್ಯದಲ್ಲಿ ಹೊಲಿಗೆ ವೃತ್ತಿಯವರಿಗೆ ಕ್ಷಮೆ ನಿಧಿ.

90 (990) ಶ್ರೀ ಮೋಹನ್ ಕೆ. ಶೆಟ್ಟಿ (ಕುಮಟ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇರುವ ಹೊಲಿಗೆ ವೃತ್ತಿಯವರಿಗೆ ಕ್ಷಮೆ ನಿಧಿ ಸವಲತ್ತು ಕಲ್ಪಿಸಿದೆಯೆ?

ಅ) ಹಾಗಿದ್ದಲ್ಲಿ ಕೇರಳ ರಾಜ್ಯದಲ್ಲಿ ಜಾರಿಗೆ ತಂದಿರುವ ಮಾದರಿಯಲ್ಲಿ ರಾಜ್ಯದಲ್ಲಿ ಜಾರಿಗೊಳಿಸಲಾಗುವುದೇ

ಇ) ಎಂದಿನಿಂದ ಜಾರಿಗೆ ತರಲಾಗುವುದು.

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು):

ಅ) ಹೊಲಿಗೆ ವೃತ್ತಿಯವರಿಗಾಗಿಯೇ ಪ್ರತ್ಯೇಕ ಎಂದು ಕ್ಷೇಮ ನಿಧಿ ಕಲ್ಪಿಸಲಾಗಿಲ್ಲ.

ಆ) ಈ ವೃತ್ತಿಯಲ್ಲಿ ನಿರತ ಕೆಲಸಗಾರರನ್ನು ಒಳಗೊಂಡಂತೆ 68 ಅನುಸೂಚಿತ ಉದ್ಯಮದಲ್ಲಿನ ಅಸಂಘಟಿತ ಕೆಲಸಗಾರರ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರದವರು ಅಸಂಘಟಿತ ಕೆಲಸಗಾರರ ಕಲ್ಯಾಣ ವಿಧೇಯಕ 2002 ನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಿದೆ.

ಇ) ಸದನದ ಒಪ್ಪಿಗೆ ಆದ ಕೂಡಲೇ ಜಾರಿಗೆ ತರಲಾಗುವುದು.

ಶ್ರೀ ಮೋಹನ್ ಕೆ. ಶೆಟ್ಟಿ:- ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಅದರ ಬಗ್ಗೆ ನಿರ್ದಿಷ್ಟ ಅಂಕಿಗಳನ್ನು ಕೊಟ್ಟಿಲ್ಲ. ಏಕೆಂದರೆ ನಮ್ಮ ರಾಜ್ಯದಲ್ಲಿ ಸುಮಾರು ಏಳೂವರೆ ಲಕ್ಷ ಜನ ಹೊಲಿಗೆ ವೃತ್ತಿ ಮಾಡುವವರು ಇದ್ದಾರೆ. ಅವರಲ್ಲಿ ಶೇಕಡಾ ಅರವತ್ತು ಅರವತ್ತೈದರಷ್ಟು ಮಹಿಳೆಯರು ಈ ಹೊಲಿಗೆ ವೃತ್ತಿ ಮಾಡುವವರಿದ್ದಾರೆ. ಆದರಿಂದ ನಮ್ಮ ಸರ್ಕಾರಕ್ಕೆ ಅವರಿಗೆ ಉದ್ಯೋಗ ಕೊಡುವ ತೊಂದರೆ ತಪ್ಪುತ್ತಿದೆ. ಹಾಗೆಯೇ ಮಹಿಳೆಯರು ಹೆಚ್ಚು ಇರುವುದರಿಂದ ನಮ್ಮ ಸರ್ಕಾರದ ಕಳಕಳಿ ಮಹಿಳೆಯರ ಮೇಲೆ ಇರುವುದರಿಂದ ಅವರಿಗೆ ಕ್ಷೇಮ ನಿಧಿಯನ್ನು ಆದಷ್ಟು ಬೇಗ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಈ ವೃತ್ತಿಯಿಂದ ನಮ್ಮ ದೇಶಕ್ಕೆ ಫಾರಿನ್ ಎಕ್ಸಚೇಂಜ್ ಕೂಡ ಬಹಳ ಪ್ರಮಾಣದಲ್ಲಿ ಬರುತ್ತಿದೆ. ಆದ್ದರಿಂದ ಸರ್ಕಾರದವರು ಇದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟು ಅವರಿಗೆ ಈ ಕ್ಷೇಮ ನಿಧಿಯನ್ನು ವ್ಯವಸ್ಥೆ ಮಾಡಿಕೊಡಬೇಕು. ಮತ್ತು ಅವರ ಎಲ್ಲಾ ಹದಿನೆಂಟು ಬೇಡಿಕೆಗಳು ಏನಿವೆ, ಅವುಗಳನ್ನು ಈಡೇರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಖಮರುಲ್ ಇಸ್ಲಾಂ:- ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕದಲ್ಲಿ ಐದು ಕೋಟಿ ಜನಸಂಖ್ಯೆ ಇದೆ. ಈ ಐದು ಕೋಟಿಯಲ್ಲಿ 94 ಲಕ್ಷ ಜನ working under un-organized sectors. ಬೇರೆ ಅಗ್ರಿಕಲ್ಚರ್‌ನಲ್ಲಿ 64 ಲಕ್ಷ ಜನ ಇದ್ದಾರೆ. ಅದೇ ತರಹ Six lakh workers are in the construction and of tailoring also. The Government has already introduced in the last session a bill Avery Comprahensive Bill which will be a model Bill in the country to cover all these sections has been introduced by our Government.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ:- ಅಧ್ಯಕ್ಷರೇ, ಮಾನ್ಯ ಸಚಿವರು ಕನ್ನಡದಲ್ಲಿ ಮಾತನಾಡಲಿ.

ಅಧ್ಯಕ್ಷರು:- ಅವರಿಗೆ ತೊಂದರೆ ಇದೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ:- ತೊಂದರೆ ಏನೂ ಇಲ್ಲ. ನನ್ನ ಹತ್ತಿರ ಅವರು ಫೋನ್‌ನಲ್ಲಿ ಬಹಳ ಚೆನ್ನಾಗಿ ಕನ್ನಡ ಮಾತನಾಡುತ್ತಾರೆ.

ಶ್ರೀ ಖಮರುಲ್ ಇಸ್ಲಾಂ:- ನಮ್ಮ ಸರ್ಕಾರ ಬಹಳ ಒಳ್ಳೆಯ ಕಾಂಪ್ರಹೆನ್ಸೀವ್ ಬಿಲ್‌ನ್ನು ಆ ಹೌಸ್‌ನಲ್ಲಿ ಇಂಟ್ರೋಡ್ಯೂಸ್ ಮಾಡಿದೆ. ಮೇಲ್ನೆಯಲ್ಲಿ ಅದು ಹೌಸ್ ಕಮಿಟಿಗೆ ರೆಫರ್ ಆಗಿದೆ. 94 ಲಕ್ಷ ಜನ ಏನು ಅನ್‌ಆರ್ಗನೈಸ್ಡ್ ಸೆಕ್ಟಾರ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ, ನಮಗೆ ಸ್ವಾತಂತ್ರ್ಯ ಬಂದ ಮೇಲೆ ಕೇಂದ್ರ ಸರ್ಕಾರವಾಗಲೀ, ಮತ್ತು ಯಾವುದೇ ರಾಜ್ಯ ಸರ್ಕಾರವಾಗಲೀ ಈ ಅನ್‌ಆರ್ಗನೈಸ್ಡ್ ಜನರ ಬಗ್ಗೆ ಏನೂ ಒಂದು ಲೆಜಿಸ್ಲೇಷನ್ ತಂದಿರಲಿಲ್ಲ. ಈಗ ಈ ಬಿಲ್‌ನಲ್ಲಿ The tailoring schedule is also introduced along with the 68 schedules. There we are giveing facilities in six sectors - Education, Health, Housing P.F. and Minimum wages. ಎಲ್ಲಾ ಕೊಡುತ್ತಿದ್ದೇವೆ. ಕೇಂದ್ರಸರ್ಕಾರದಲ್ಲಿ ಇದೇ ತರದ ಒಂದು ಬಿಲ್ ಡ್ರಾಫ್ಟ್ ಆಗಿದೆ. ಈ ಹೌಸ್ ಕಮಿಟಿಯಲ್ಲಿ ಕೇಂದ್ರ ಸರ್ಕಾರದ ಡ್ರಾಫ್ಟಡ್ ಬಿಲ್‌ನ್ನು ತಂದು, ಅಲ್ಲಿಗೆ ನಮ್ಮದು ಏನು ರೆಫರ್ ಆಗಿದೆ ಅದೆಲ್ಲಾ ಕಂಪೇರಿಟಿವ್ ಸ್ಟಡಿ ಮಾಡಿ ಇಟ್ಟಿದ್ದಾರೆ. ನಮಗೆ ವಿಶ್ವಾಸ ಇದೆ, ಏನೆಂದರೆ ಈ ಹೌಸ್‌ನಲ್ಲಿ ಆ ಬಿಲ್ ಬರುತ್ತಾ ಇದೆ. ಸ್ವಾತಂತ್ರ್ಯ ನಂತರ ಬರುತ್ತಿರುವ ಈ ಮಸೂದೆಗೆ ಬಹಳ ಮಹತ್ವ ಇದೆ. ತಾವು ಇದನ್ನು ಸ್ವಾಗತ ಮಾಡುತ್ತೀರೆಂಬ ನಂಬಿಕೆ ನಮಗೆ ಇದೆ. ಇದರಿಂದ ಎಲ್ಲರಿಗೂ ಸಹಾಯಕವಾಗುತ್ತದೆ ಎಂದು ನಾನು ಆಶ್ವಾಸನೆ ಕೊಡುತ್ತಿದ್ದೇನೆ. ಇನ್ನು ಎರಡು - ಮೂರು ತಿಂಗಳಲ್ಲಿ, ಮುಂದಿನ ಅಧಿವೇಶನದಲ್ಲಿ ಆ ಬಿಲ್ ಬರುತ್ತಿದೆ. ಎಲ್ಲಾ ಈ ಬಿಲ್‌ನಲ್ಲಿ ಇನ್‌ಕ್ಲೂಡ್ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಸಚಿವರು ಈ ಅಸಂಘಟಿತ ಕಾರ್ಮಿಕರ ಸಲುವಾಗಿ ಒಂದು ಕಂಬೈನ್ಡ್ ಬಿಲ್ ತರುತ್ತಿದ್ದೇವೆ ಎಂದು ಹೇಳಿದರು. ಇವತ್ತು ಈ ಟೇಲರಿಂಗ್ ವೃತ್ತಿಯಲ್ಲಿ ಇದ್ದಂಥವರಿಗೆ ಈ ಕ್ಷೇಮನಿಧಿ ಬಗ್ಗೆ ನಿರ್ದಿಷ್ಟವಾದ ಪ್ರಶ್ನೆ ಇರತಕ್ಕಂಥಾದ್ದು. ಕೇರಳದಲ್ಲಿ ಈಗಾಗಲೇ ಒಂದು ಬಿಲ್ ತೆಗೆದುಕೊಂಡು ಬಂದಿದ್ದಾರೆ, ಮತ್ತು ಆ್ಯಕ್ಟ್‌ನ್ನೂ ಕೂಡ ಪಾಸ್ ಮಾಡಿದ್ದಾರೆ. ಈ ಟೇಲರಿಂಗ್ ವೃತ್ತಿಯಲ್ಲಿ ಯಾರು ಅವಲಂಬಿತವಾಗಿದ್ದಾರೆ, ಅವರ ಕ್ಷೇಮ ನಿಧಿ ಸಲುವಾಗಿ ಈಗಾಗಲೇ ಒಂದು ಆ್ಯಕ್ಟ್ ಅಲ್ಲಿ ಚಾಲ್ತಿಯಲ್ಲಿದೆ. ಅದನ್ನು ನೀವು ತರಿಸಿಕೊಂಡು ಅದರ ಪ್ರಕಾರ ಮಾಡಿದರೆ ಒಳ್ಳೆಯದು ನಮ್ಮಲ್ಲಿ ಏನು ಏಳೂವರೆ ಲಕ್ಷಕ್ಕಿಂತ ಹೆಚ್ಚು ಟೇಲರಿಂಗ್ ವೃತ್ತಿಯವರು ಇದ್ದಾರೆ, ಮತ್ತು ಅವರ ಮೇಲೆ ಲಕ್ಷಾಂತರ ಕುಟುಂಬಗಳು ಏನು ಅವಲಂಬಿಸಿದ್ದಾರೆ ಅವರಿಗೆ ಯಾವುದೇ ಜೀವನದಲ್ಲಿ ಸುರಕ್ಷತೆ ಎನ್ನುವುದು ಇಲ್ಲ. ಈಗಾಗಲೇ ಟೇಲರಿಂಗ್ ಅಸೋಸಿಯೇಶನ್‌ನವರು ಇಡೀ ರಾಜ್ಯದಲ್ಲಿ ಮೂರು-ನಾಲ್ಕು ಕಡೆ ಸಮಾವೇಶಗಳನ್ನು ಮಾಡಿ ತಮ್ಮ ಬೇಡಿಕೆ ಮಂಡನೆ ಮಾಡಿದ್ದಾರೆ. ಒಂದು ಸಮಾವೇಶಕ್ಕೆ ನಾನೂ ಕೂಡ ಮುಖ್ಯ ಅತಿಥಿಯಾಗಿ ಹೋಗಿದ್ದೆ. ಏಕೆಂದರೆ ಅವರಿಂದಾಗಿ ನಮಗೆ ರಫ್ತು ಮಾಡುವುದಕ್ಕೆ ಬಹಳಷ್ಟು ಅನುಕೂಲವಾಗುತ್ತದೆ, ರೆಡಿಮೇಡ್ ಗಾರ್ಮೆಂಟ್ಸ್ ಏನು ಅವರು ತಯಾರು ಮಾಡುತ್ತಿದ್ದಾರೆ, ಅದು ರಫ್ತು ಆಗುತ್ತಿದೆ ಮತ್ತು ಇದರಿಂದ ಹೆಚ್ಚಿನ ಒಂದು ಆರ್ಥಿಕವಾದಂಥ ಸದೃಢತೆ ನಮ್ಮ ದೇಶಕ್ಕೆ ಸಿಗುತ್ತಿದೆ. ಹೀಗೆ ಅವರಿಗೆ ನಾವು ಪ್ರೋತ್ಸಾಹ ಮಾಡತಕ್ಕದ್ದು ಅವಶ್ಯಕತೆ ಇದೆ. ಅವರು ಅಸಂಘಟಿತವಾಗಿದ್ದರೂ ಕೂಡ ಹೆಚ್ಚಿನ ಉತ್ತೇಜನ ಕೊಡುವಂಥಾದ್ದು ಇದೆ. ಅದಕ್ಕಾಗಿ ಕೇರಳದಲ್ಲಿ ಏನೊಂದು ಬಿಲ್ ಪಾಸ್ ಮಾಡಿದ್ದಾರೆ, ಆ್ಯಕ್ಟ್‌ನ್ನು ಜಾರಿಗೆ ತಂದಿದ್ದಾರೆ, ಅದನ್ನು ತರಿಸಿಕೊಂಡು ಆ ರೀತಿಯಲ್ಲಿ ಇವರಿಗೆ ಒಂದು ಕ್ಷೇಮ ನಿಧಿಯನ್ನು ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಇದರಿಂದ ಈ

ಜನರಿಗೆ ಬಹಳ ಉಪಕಾರ ಮಾಡಿದಂತಾಗುತ್ತದೆ. ನೀವು ಅಸಂಘಟಿತ ವರ್ಗದವರಿಗೆ ಈ ಕಂಬೈನ್ಡ್ ಬಿಲ್‌ನ್ನು ತೆಗೆದುಕೊಂಡು ಬನ್ನಿ ಆದರೆ ಅದಕ್ಕಿಂತ ಮೊದಲು ಇದನ್ನು ಮಾಡಬೇಕಾದ ಅವಶ್ಯಕತೆ ಇರುವುದರಿಂದ, ಅದನ್ನು ದಯವಿಟ್ಟು ಮಾಡಿ.

ಶ್ರೀ ಖಮರುಲ್ ಇಸ್ಲಾಂ:- ಮಾನ್ಯ ವಿರೋಧ ಪಕ್ಷದ ನಾಯಕರು ಕೇರಳದಲ್ಲಿನ ಬಿಲ್ ಬಗ್ಗೆ ಹೇಳುತ್ತಿದ್ದಾರೆ, ಕೇರಳದಲ್ಲಿ ಅದು ಹನ್ನೆರಡು ಶೆಡ್ಯೂಲ್‌ಗಳು ಇವೆ. ಈ ಕಾಂಪ್ರಹೆನ್ಸೀವ್ ಬಿಲ್‌ನಲ್ಲಿ ಇದಕ್ಕೆ ಪ್ರಾವಿಜನ್ ಇದೆ. Either we can form 68 Boards or we can form 10 Boards covering these sectors. ನಮ್ಮ ಬಿಲ್‌ನಲ್ಲಿ more than the kerala, we have given the welfare. ಸ್ವಲ್ಪ ವಾಚ್ ಮಾಡಿ. ತಮಿಳುನಾಡಿನಲ್ಲಿ ಕನ್‌ಸ್ಟ್ರಕ್ಷನ್ ಬಗ್ಗೆ ಒಂದು ವೆಲ್‌ಫೇರ್ ಬೋರ್ಡ್ ಇದೆ, ಮಹಾರಾಷ್ಟ್ರದಲ್ಲಿ ಈ ಹಮಾಲಿಗಳ ಬಗ್ಗೆ ಒಂದು ಬೋರ್ಡ್ ಇದೆ. ನಮ್ಮ ಈ ಬಿಲ್‌ನಲ್ಲಿ ಪ್ರಾವಿಜನ್ ಇದೆ. Either 68 schedules can be covered in one Boards or 10 boards or in 12 Boards. These are all the options availase to the Government and this Bill is already before the session. There is no question of bringing a new Bill This has already been covered. We have discussed this matter. The House committee has discussed this matter with the tailoring people and all other leaders who are dealing with this. So, there is no need now to bring a separate Bill when the matter is already been there in the House under the Comprahensive Bill.

ಶ್ರೀ **ಅರಗ ಜ್ಞಾನೇಂದ್ರ**:- ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಕೂಡ ಬಹಳ ದೊಡ್ಡ ಸಮಾವೇಶವನ್ನು ಅವರು ಮಾಡಿದ್ದಾರೆ. ರಾಜ್ಯದಲ್ಲಿ ಲಕ್ಷಾಂತರ ಮಂದಿ, ವಿಶೇಷವಾಗಿ ಮಹಿಳೆಯರು ಇದರಲ್ಲಿ ಇದ್ದಾರೆ. ಯಾವುದೇ ಸರ್ಕಾರದ ಉದ್ಯೋಗವನ್ನು ಪೇಕ್ಷೆಪಡದೆ, ಹೆಚ್ಚು ವಿದ್ಯೆ ಕಲಿಯದೇ ಇರತಕ್ಕಂಥ ಈ ಜನ ಟೇಲರಿಂಗ್ ವೃತ್ತಿಯಿಂದ ತಮ್ಮ ಬದುಕನ್ನು ನಡೆಸುತ್ತಿದ್ದಾರೆ. ಅಂತಹವರ ಒಂದು ಕ್ಷೇಮಕ್ಕಾಗಿ ಇಂತಹ ಒಂದು ಪ್ರತ್ಯೇಕವಾದಂಥ ಬಿಲ್‌ನ್ನು ತರತಕ್ಕಂಥ ಅವಶ್ಯಕತೆ ಇದೆ. ಇವರು ಬಹಳಷ್ಟು ಸಮಾವೇಶ ಮಾಡಿ ತಮಗೆ ಈಗಾಗಲೇ ಮನವಿಯನ್ನು ಕೂಡ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಉದಾರವಾಗಿ ಯೋಚನೆ ಮಾಡಿ ಸರ್ಕಾರದವರು ಇಂತಹ ಒಂದು ಬಿಲ್‌ನ್ನು ತಂದರೆ ಲಕ್ಷಾಂತರ ಕುಟುಂಬಗಳಿಗೆ ಒಂದು ಭದ್ರತೆಯನ್ನು ಒದಗಿಸಿದ ಪುಣ್ಯಕ್ಕೆ ನೀವು ಒಳಗಾಗುತ್ತೀರಿ ಎಂದು ಹೇಳುತ್ತೇನೆ.

ಅಧ್ಯಕ್ಷರು:- ಅವರು ತರುತ್ತೇವೆ ಎಂದು ಹೇಳಿದ್ದಾರೆ.

ಶ್ರೀ **ಅರಗ ಜ್ಞಾನೇಂದ್ರ**:- ಲಕ್ಷಾಂತರ ಜನ ಆದರಲ್ಲೂ ವಿಶೇಷವಾಗಿ ಮಹಿಳೆಯರೇ ಈ ವೃತ್ತಿಯನ್ನು ಅವಲಂಬಿಸಿಕೊಂಡಿರುವುದರಿಂದ ಇಂತಹ ಒಂದು ಅವಕಾಶವನ್ನು ಕಲ್ಪಿಸಬೇಕು. ಇದರಿಂದ ನಮ್ಮ ರಾಜ್ಯದಲ್ಲಿ ಉತ್ಪಾದನೆ ಕೂಡ ಜಾಸ್ತಿಯಗುತ್ತದೆ. ಹೊರಗಡೆ ಎಕ್ಸ್‌ಪೋರ್ಟ್ ಮಾಡುವುದರಿಂದ ನಮಗೆ ಫಾರಿನ್ ಎಕ್ಸ್‌ಚೇಂಜ್ ಸಹ ಬುರವುದಕ್ಕೆ ಸಾಧ್ಯವಾಗುತ್ತದೆ. ಇಂತಹ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಯೋಗಿಶ್ ಭಟ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ತರುವಂತಹ ಬಿಲ್‌ನಲ್ಲಿ ಕ್ಷೇಮನಿಧಿಗೆ ಸಂಬಂಧಪಟ್ಟಂತೆ ಮಾತ್ರ ಯೋಚನೆ ಮಾಡುವುದಲ್ಲ, ಅದರ ಜೊತೆಯಲ್ಲಿ ಅವರಿಗೆ ಪೆನ್‌ಷನ್ ಸಹ ಸಿಗುವ ನಿಟ್ಟಿನಲ್ಲಿ ಒಂದು ವಿಶೇಷ ಯೋಜನೆಯನ್ನೂ ಸಹ ಅಳವಡಿಸಬೇಕೆಂದು, ಮತ್ತು ಅವರು ಒಂದು ತಿಂಗಳಿಗೆ 10 ರೂಪಾಯಿಗಳನ್ನು ಕಟ್ಟುವ ಮೂಲಕ ಸುಮಾರು 400 ರೂಪಾಯಿಗಳು ಪೆನ್‌ಷನ್ ಸಿಗುವಂತಹ ಒಂದು ವ್ಯವಸ್ಥೆ ಕೇರಳ ಸರ್ಕಾರದಲ್ಲಿ ಇದೆ. ನಮ್ಮಲ್ಲಿ 20 ರೂಪಾಯಿಗಳನ್ನು ತಿಂಗಳಿಗೆ ತೆಗೆದುಕೊಂಡು ಅವರಿಗೆ ಒಂದು ತಿಂಗಳಿಗೆ 700-800 ರೂಪಾಯಿ ಪೆನ್‌ಷನ್ ಸಿಗುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ನಮ್ಮ ಊರಿನಲ್ಲಿ ಒಂದು ಮಾತು ಉಂಟು. ಎಂತಹ ಹೀಟಣ್ಣ ಎಂತ ಹೀಟ್ ಬೆಡ್‌ನಲ್ಲಿ ಮಲಗಿದರೆ ಸ್ಲೀಪೇ ಬಾರದಿಲ್ಲೇ ಅಂತ ಹೇಳಿ, ಅಂತ ಕೆಲಸ ಆಗಬಹುದು, ಏಕೆಂದರೆ ಇದರಲ್ಲಿ ಒಂದು ಉತ್ತಮವಾದ ಕಾರ್ಯಕ್ರಮ ಆಗಬೇಕಾಗಿದೆ. ಏಕೆಂದರೆ ಟೈಲರಿಂಗ್ ವ್ಯವಸ್ಥೆಯಲ್ಲಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಹೇಳಿದ್ದು ಅವರಿಗಂತೂ ಅರ್ಥವಾಗಲಿಲ್ಲ. ನಮಗಾದರೂ ಅರ್ಥವಾಗುವಂತೆ ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಅರ್ಥವಾಗಲಿಕ್ಕೆ ಒಂದು ಏನಾಗಿದೆ ಅಂದರೆ, ಮಾನ್ಯ ಚಂದ್ರೇಗೌಡರಿಗೆ ಸ್ವಲ್ಪ ಗೊತ್ತಿದೆ, ಏಕೆಂದರೆ ನೀವು ನಮ್ಮ ಊರಿನ ಸಂಬಂಧಿಕರಲ್ಲವೇ, ನಮ್ಮ ಊರಿನಲ್ಲಿ ಒಂದು ಭಾಷೆಯುಂಟು, ಆರೆ ಭಾಷೆ ಅಂತ ಹೇಳಿ. ಅದರಲ್ಲಿ ಸ್ವಲ್ಪ ಇಂಗ್ಲೀಷ್ ಮಿಕ್ಸ್ ಮಾಡಿ ಮಾತನಾಡಿದರೆ ಅದು ಅರ್ಥವಾಗುವುದಿಲ್ಲ. ಆದ್ದರಿಂದ ಇವರು ಮಾತನಾಡುವ ಕನ್ನಡ ಅದೇ ರೀತಿ. ಎಂತಾ ಹೀಟಣ್ಣ ಎಂತಾ ಹೀಟು ಬೆಡ್ಡಲ್ಲಿ ಮಲಗಿದರೆ ಸ್ಲೀಪೇ ಬಾದುಲೇ ಅಂತ ಹೇಳಿ. ಬಹುಶಃ ಮಾನ್ಯ ಚಂದ್ರೇಗೌಡರಿಗೆ ಗೊತ್ತಿದೆ. ಅಂತ ಕಾಣುತ್ತದೆ. ಆ ರೀತಿಯಾಗುತ್ತದೆ. ಈಗ ಯಾವ ಬೆಡ್‌ನಲ್ಲಿ ಮಲಗಿದರೆ ಯಾವ ಸ್ಲೀಪ್ ಬರಬೇಕು ಎನ್ನುವುದು ಗೊತ್ತಾಗುತ್ತಿಲ್ಲ ಅದನ್ನು ನಾನು ಹೇಳಿದ್ದು ಅಷ್ಟೇ. ಈಗ ಇಲ್ಲಿರುವಂತಾದ್ದು, ಈ ಸರ್ಕಾರಕ್ಕೆ ಬೀಡಿ ಕಾರ್ಮಿಕರ ಬಗ್ಗೆ ಕಾಳಜಿ ಇಲ್ಲ. ಈ ಸರ್ಕಾರಕ್ಕೆ ಟೈಲರಿಂಗ್ ಮಾಡುವವರ ಬಗ್ಗೆ ಕಾಳಜಿ ಇಲ್ಲ. ಈ ಸರ್ಕಾರಕ್ಕೆ ಅವರವರಷ್ಟಕ್ಕೆ ಸ್ವ ಉದ್ಯೋಗ ಮಾಡಿಕೊಂಡು ಬದುಕುವವರ ಬಗ್ಗೆ ಕಾಳಜಿ ಇಲ್ಲ. ಈ ಸರಕಾರಕ್ಕೆ ಅವರವರ ಕಷ್ಟಕ್ಕೆ ಸ್ವ ಉದ್ಯೋಗ ಮಾಡಿಕೊಂಡು ಬದುಕುವವರ ಬಗ್ಗೆ ಕಾಳಜಿ ಇಲ್ಲ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಕೇರಳದಲ್ಲಿ ಇದೇ ರೀತಿಯ ಒಂದು ವ್ಯವಸ್ಥೆಗೆ ಪೂರಕವಾಗಿ ಒಂದು ಬಿಲ್ ತಂದಿದ್ದಾರೆ. ಆ ಬಿಲ್‌ನಲ್ಲಿ ಎಲ್ಲಿಯವರೆಗೂ ಇದೆ ಅಂತ ಹೇಳಿದರೆ ಅವರಿಗೆ ಕ್ಷೇಮನಿಧಿ ಕೊಡುವುದರಿಂದ ಹಿಡಿದು ಅವರ ವೃತ್ತಿಯಲ್ಲಿ ಅವರು ಕೆಲಸ ಮಾಡಲಿಕ್ಕೆ ಆಗದೇ ಇರುವಾಗ ಅವರಿಗೆ ಪೆನ್‌ಷನ್ ಕೊಡುವುದರಿಂದ ಹಿಡಿದು ಅವರು ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಅಪಘಾತಕ್ಕೆ ಈಡಾದರೆ ಅವರ ಕುಟುಂಬಕ್ಕೆ ಪೋಷಣೆ ಕೊಡುವುದರಿಂದ ಹಿಡಿದು ಎಲ್ಲಾ ವ್ಯವಸ್ಥೆಗಳನ್ನು ಮಾಡುವಂತಹ ಒಂದು ಸಮಗ್ರವಾದಂಥ ಮಸೂದೆ ಕೇರಳದಲ್ಲಿದೆ. ನಾನು ಕೇಳುವಂಥಾದ್ದು ಇವತ್ತು ಸರ್ಕಾರ ಉದ್ಯೋಗ ಕೊಡುವುದಕ್ಕೆ ಆಗುವುದಿಲ್ಲ. ಸರ್ಕಾರದಿಂದ ಸಹಾಯ ಮಾಡುವುದಕ್ಕೆ ಆಗುವುದಿಲ್ಲ. ಯಾರು ಸ್ವ ಉದ್ಯೋಗ ಮಾಡಿಕೊಂಡಿದ್ದಾರೋ ಅವರು ತಮ್ಮ ಕೊಡುಗೆಯಿಂದ ತಮ್ಮ ವಾರ್ಷಿಕ

ದೇಣಿಗೆಯಿಂದ ಯಾವುದಾದರೂ ಒಂದು ಉಳಿತಾಯವನ್ನು ಮಾಡಿ ಅಂತಹ ಒಂದು ಬಿಲ್ ಅನ್ನು ಪ್ರತ್ಯೇಕವಾಗಿ ತರುವುದಕ್ಕೆ ಏನು ತೊಂದರೆ? ಕೇರಳದಲ್ಲಿರುವ ಮಸೂದೆಯನ್ನು ತರಿಸಿ ತಾವು ನೋಡಿ. ಈಗ ಕೇರಳದ ಮಾದರಿಯಲ್ಲಿಯೇ ತಂದರೆ ಏನಾಗುತ್ತದೆ ಅಂದರೆ ಸುಮಾರು ಏಳೂವರೆ ಲಕ್ಷ ಕುಟುಂಬಗಳು ಸ್ವಂತ ಕಾಲಲ್ಲಿ ನಿಂತು ಅವರು ಕೆಲಸ ಮಾಡುವುದಕ್ಕೆ ಆಗುತ್ತದೆ. ಅವರಿಗೆ ತೊಂದರೆಯಾದಾಗ ಅದರಿಂದಲೇ ಅವರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಆಗುತ್ತದೆ. ಅವರಿಗೆ ಪೆನ್‌ಷನ್ ಕೊಡಲಿಕ್ಕೆ ಬೇಕಾದ ಮೊತ್ತವನ್ನು ಅವರಿಂದಲೇ ಭರಿಸಿ ಮಾಡುವಂತಹ ಕೆಲಸಕಾರ್ಯಗಳು ಆಗುತ್ತದೆ. ನೀವು ಸಮಗ್ರವಾಗಿ ಎಲ್ಲಾ ಅಸಂಘಟಿತ ಕಾರ್ಮಿಕರ ಬಗ್ಗೆ ನಾವು ಒಂದು ಮಸೂದೆಯನ್ನು ಮಂಡನೆ ಮಾಡುತ್ತೇನೆಂದು ಹೇಳಿದರೆ ಬಹುಶಃ ಪೂರ್ತಿ ಪ್ರಮಾಣದಲ್ಲಿ ಅದರಿಂದ ಯಾರಿಗೂ ಲಭ್ಯತೆಗಳು ಆಗುವಂತಹ ಸಾಧ್ಯತೆಗಳು ಇಲ್ಲ, ಅದಕ್ಕಾಗಿ ನಾವು ಆಗ್ರಹ ಮಾಡುವುದು ಇಷ್ಟೇ, ಈ ಒಂದು ಪ್ರತ್ಯೇಕವಾದಂಥ ಯಾರು ಟೈಲರಿಂಗ್ ಮಾಡುವರರಿಗೆ ಕೇರಳದ ಮಾದರಿಯಾದ ಪ್ರತ್ಯೇಕವಾದ ಒಂದು ಕಾನೂನು ತರುವುದರ ಮೂಲಕ ಅವರ ಸಮಗ್ರ ಅಭಿವೃದ್ಧಿಗೆ ಕೇರಳದಲ್ಲಿ ಎಷ್ಟರವರೆಗೂ ಇದೆ ಅಂತ ಹೇಳಿದರೆ ಆ ಟೈಲರ್‌ಗಳ ಮಕ್ಕಳಿಗೆ ವಿದ್ಯಾ ಕ್ಷೇತ್ರದಲ್ಲಿ ಯಾವ ರೀತಿಯ ಪ್ರಾತಿನಿಧ್ಯ ಕೊಡಬೇಕು ಎಂದು ಹೇಳುವಂತಾದ್ದು ಸಹ ಇದೆ. ತಾವು ದಯವಿಟ್ಟು ಆಲೋಚನೆ ಮಾಡಿ ಏಕೆಂದರೆ ಭಾರಿ ಕೆಳಮಟ್ಟದಲ್ಲಿರುವಂತಹ ಜನ ವಿಶೇಷವಾಗಿ ಮಹಿಳೆಯರು, ಇವತ್ತು ನಮ್ಮ ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆಯಿಂದ ಬೇರೆ ಬೇರೆ ಇಲಾಖೆಗಳಿಂದ ಮಹಿಳೆಯರಿಗೆ ಸ್ವ ಉದ್ಯೋಗಕ್ಕೆ ಟೈಲರಿಂಗ್ ಮೆಷನ್‌ಗಳನ್ನು ನೀವು ಕೊಡುತ್ತೀರಿ. ಟೈಲರಿಂಗ್ ಮನೆಯಲ್ಲಿಯೇ ಮಾಡಿ ಎಂದು ಹೇಳುತ್ತೀರಿ. ಆದರೆ ಅದಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವಂತಹ ಕೆಲಸ ಮಾಡಬೇಕು.

ಶ್ರೀ ಸಿ.ಎಸ್. ನಾಡಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿದ್ದಾರೋ ಅಥವಾ ಭಾಷಣ ಮಾಡುತ್ತಿದ್ದಾರೋ

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಇದು ಭಾಷಣವಲ್ಲ. ನಿಮಗೆ ಕಾರ್ಮಿಕರ ಸಂಗತಿ ಗೊತ್ತಾಗುತ್ತಿಲ್ಲ.

ಶ್ರೀ ಸಿ. ಎಸ್. ನಾಡಗೌಡ:- ಮಾನ್ಯ ಅಧ್ಯಕ್ಷರೇ, ಬೇರೆ ರೀತಿಯಲ್ಲಿ ಬೇಕಾದರೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಲಿ. ಸರ್ಕಾರ ಅದರಲ್ಲಿ ವಿಫಲವಾಗಿದೆ, ಇದರಲ್ಲಿ ವಿಫಲವಾಗಿದೆ. ಅಂತ ಭಾಷಣ ಮಾಡುತ್ತಿದ್ದೀರಿ.

ಶ್ರೀ ಡಿ.ವಿ. ಸಾದನಂದಗೌಡ:- ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದಲ್ಲಿ ಟೈಲರಿಂಗ್ ಮಾಡುವುದರ ಬಗ್ಗೆ ನಿಮಗೇನಾದರೂ ಕಾಳಜಿ ಉಂಟೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಮಾನ್ಯ ಅಧ್ಯಕ್ಷರೇ ನಾನು ಆರ್ಜಿಗಳ ಸಮಿತಿಗೆ ಒಂದು ಆರ್ಜಿಯನ್ನು ಕೊಟ್ಟು ಬಹಳಷ್ಟು ಸಮಯ ಆಯಿತು. ಮತ್ತು ಇದರ ಬಗ್ಗೆ ಬಹಳಷ್ಟು ಚರ್ಚೆ ಸಹ ಆಗಿದೆ. ಈಗ ಮಾನ್ಯ ಸಚಿವರು ಕಟ್ಟಡ ಕಟ್ಟುವವರ ಬಗ್ಗೆ ಸಹ ಹೇಳಿದರು. ಆದರೆ ಈಗಾಗಲೇ ಕನ್‌ಸ್ಟ್ರಕ್ಷನ್ಸ್ ವರ್ಕರ್ಸ್ ಬಗ್ಗೆ ಕೇಂದ್ರ ಸರ್ಕಾರದ ಒಂದು ಕಾಯ್ದೆ ಇದೆ. ಕೇರಳದಲ್ಲಿ ಟೈಲರಿಂಗ್ ಬಗ್ಗೆ ಏನು ಒಂದು ಕಾಯ್ದೆ ಇದೆ, ಅದನ್ನೆಲ್ಲಾ ಓದಿದಾಗ ಪ್ರತಿಯೊಂದು ಕೆಲಸದ

ವರ್ಕರ್ಸ್ ಕೆಲಸ ಬೇರೆ ಇರುತ್ತದೆ. ಈಗ ಕನ್‌ಸ್ಟ್ರಕ್ಷನ್ಸ್ ವರ್ಕರ್ಸ್ ಕೆಲಸ ಬೇರೆ ಇರುತ್ತದೆ. ಟೈಲರ್ಸ್ ಕೆಲಸವೇ ಬೇರೆ ಆದ್ದರಿಂದ ಸಪರೇಟ್ ಕಾಯ್ದೆ ಆಗಲೇಬೇಕಾಗುತ್ತದೆ. ಎಲ್ಲವನ್ನೂ ಕನ್‌ಸಾಲಿಡೇಟ್ ಮಾಡಿದಾಗ ಒಟ್ಟಾರೆ ಕನ್‌ಫ್ಯೂಷನ್ ಆಗುತ್ತದೆ. ಆದ್ದರಿಂದ ನೀವು ಅಸಂಘಟಿತ ಕಾರ್ಮಿಕರು ಅಂತ ಹೇಳಿದರೆ ಕೃಷಿ ಕೂಲಿ ಕಾರ್ಮಿಕರನ್ನು, ಟೈಲರ್ಸ್‌ನ್ನು ಮತ್ತು ಕನ್‌ಸ್ಟ್ರಕ್ಷನ್ ವರ್ಕರ್ಸ್‌ನ್ನು ಎಲ್ಲರನ್ನೂ ಒಂದು ಲೈನ್‌ಗೆ ತಂದು ಬಿಟ್ಟು ಕಾಯ್ದೆಯನ್ನು ಮಾಡಿದರೆ ಅದನ್ನು ಸರಿಯಾಗಿ ಜಾರಿಗೆ ತರುವುದಕ್ಕೂ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ಎಲ್ಲರಿಗೂ ಪ್ರತ್ಯೇಕವಾದ ಕಾಯ್ದೆಯನ್ನು ತರುವುದಕ್ಕೆ ತಾವು ಪ್ರಯತ್ನ ಮಾಡಬೇಕು.

ಶ್ರೀ ಜಿ. ಚಂದ್ರಕಾಂತ ಬೆಲ್ಲದ್:- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಇವತ್ತು ಎಲ್ಲರೂ ಮಾನಾಡಿದ್ದಾರೆ. ಇದು ಬಹುಶಃ ಬಡ ಹೆಣ್ಣು ಮಕ್ಕಳ ಸಲುವಾಗಿ. ಏಕೆಂದರೆ ನಮ್ಮಲ್ಲಿ 50 ಭಾಗದಷ್ಟು ಹೆಣ್ಣು ಮಕ್ಕಳ ಸಂಖ್ಯೆ ಇದರಲ್ಲಿ ಇದೆ. ಎಷ್ಟೋ ಜನ ಬಡ ಮಕ್ಕಳು ಅವರು ವಿದ್ಯಾವಂತರಾದರೂ ಅವರಿಗೆ ನೌಕರಿ ಸಿಗುತ್ತಿಲ್ಲ. ವಿದ್ಯಾವಂತರಾದರೂ ಅವರಿಗೆ ನೌಕರಿ ಸಿಗದೇ ಇದ್ದುದ್ದಕ್ಕೆ ಎಷ್ಟೋ ಜನ ಸಹೋದರಿಯರು ಜೀವ ಕಳೆದುಕೊಳ್ಳುತ್ತಿರುವಂತಹ ಪ್ರಸಂಗವನ್ನು ನಾವು ನೋಡುತ್ತಿದ್ದೇವೆ. ಇಂತಹ ಸಮಯದಲ್ಲಿ ಇದರಿಂದ ಬಹಳಷ್ಟು ಮಂದಿ ಮಹಿಳೆಯರಿಗೆ ಉದ್ಯೋಗಾಕಾಶ ಸಿಗುತ್ತದೆ. ಮಹಿಳೆಯರು ಮನೆಯಲ್ಲಿ ಕುಳಿತುಕೊಂಡು ಉದ್ಯೋಗ ಮಾಡಬಹುದು. ಅಷ್ಟೇ ಅಲ್ಲ ಇವತ್ತು ನಮ್ಮ ದೇಶದಲ್ಲಿ ಗಾರ್ಮೆಂಟ್‌ಗೆ ಬಹಳ ಅವಕಾಶ ಇದೆ. ಈ ಉದ್ದಿಮೆ ಬೆಳೆದರೆ ನಮ್ಮ ರಾಜ್ಯದ ಜನರಿಗೆ ಕೆಲಸದ ಅವಕಾಶ ಸಿಗುತ್ತದೆ, ರಾಷ್ಟ್ರಕ್ಕೂ ಆದಾಯ ಬರುತ್ತದೆ. ಈ ಎಲ್ಲಾ ದೃಷ್ಟಿಯಿಂದ ಇದಕ್ಕೆ ಹೆಚ್ಚು ಒತ್ತು ಕೊಡಬೇಕಾಗಿದೆ. ಈಗಾಗಲೇ ನಮ್ಮ ಎಲ್ಲಾ ಸದಸ್ಯರು ಹೇಳಿದ್ದಾರೆ. ಕೇರಳದಲ್ಲಿ ಪೆನ್‌ಷನ್ ಮತ್ತು ಇತರೆ ಸೌಲಭ್ಯಗಳಿಗೆ ಅವಕಾಶವನ್ನು ಇಟ್ಟಿದ್ದಾರೆ, ಅದನ್ನೆಲ್ಲಾ ಇಲ್ಲೂ ಇಟ್ಟು ಕೊಟ್ಟರೆ ಬಹಳಷ್ಟು ಜನ ಮಹಿಳೆಯರಿಗೆ ಅನುಕೂಲವಾಗುತ್ತದೆ, ಮತ್ತೊಂದು ಪೆನ್‌ಷನ್ ಏಕೆ ಕೊಡಬೇಕು ಅಂದರೆ ಸತತವಾಗಿ ಹೆಣ್ಣು ಮಕ್ಕಳು ಏನು ಈ ಕೆಲಸವನ್ನು ಮಾಡುತ್ತಾರೆ ಅವರಿಗೆ ವಯಸ್ಸಾದ ಮೇಲೆ ಫೈಲ್ಸ್ ಬರುವಂತಹ ಒಂದು ಸಂದರ್ಭ ಇದೆ, ಸಾಧಾರಣ ಅವರು ಸುಮಾರು 60 ವರ್ಷದವರೆಗೂ ಟೈಲರಿಂಗ್ ಕೆಲಸ ಮಾಡಿರುತ್ತಾರೆ, ಇಂತಹ ಸಂದರ್ಭದಲ್ಲಿ ಅವರಿಗೆ ಪೆನ್‌ಷನ್ ಕೊಡುವಂತಹ ಅವಕಾಶ ಬಂದರೆ ಈ ಉದ್ಯೋಗ ಬೆಳೆಯುತ್ತದೆ ಮತ್ತು ಮಹಿಳೆಯರ ಕುಟುಂಬದಲ್ಲಿ ಒಳ್ಳೆಯ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ಬಗ್ಗೆ ಪರಿಶೀಲನೆ ಮಾಡುವಂತಹದ್ದು ಬಹಳ ಅವಶ್ಯಕತೆ ಇದೆ ಎಂದು ನಾನು ಹೇಳುತ್ತೇನೆ.

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :- ಮಾನ್ಯ ಅಧ್ಯಕ್ಷರೇ, The Members are asking piece meal basis. our Government is interested for the over all welfare of the un-organised sector workers.I Sir, ಇಂಗ್ಲೀಷ್‌ನಲ್ಲಿ ಒಂದು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಗೆ ಕನ್ನಡ ಬರುತ್ತದೆ.

ಶ್ರೀ ಜಿ. ಚಂದ್ರಕಾಂತ ಬೆಲ್ಲದ್:- ಮಾನ್ಯ ಸಚಿವರಿಗೆ ಕಷ್ಟವಾದರೂ ಕನ್ನಡದಲ್ಲಿ ಹೇಳಲಿ ಸ್ವಲ್ಪ ಅಭ್ಯಾಸವಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಬಸವಣ್ಣನವರು ಹುಟ್ಟಿದ ನಾಡಿನಲ್ಲಿ ಹುಟ್ಟಿದವರು ತಾವು.

ಶ್ರೀ ಖಮರುಲ್ ಇಸ್ಲಾಂ:- ಮಾನ್ಯ ಎಸ್.ಎಸ್. ಪಾಟೀಲ್‌ರವರೇ, ನಿಮಗೆ ವರ್ಕ್ ಆಗಬೇಕು ಕೆಲಸ ಆಗಬೇಕು ಅಲ್ಲವೇ?

ಶ್ರೀ ಎಸ್.ಎಸ್. ಪಾಟೀಲ್:- ಹೌದು, ಹೌದು.

ಶ್ರೀ ಜಿ. ಚಂದ್ರಕಾಂತ ಬೆಲ್ಲದ್:- ಸರ್ಕಾರದ ಆಡಳಿತ ಭಾಷೆ ಕನ್ನಡ. ಅದರ ಸಲುವಾಗಿ ಹೇಳುತ್ತಿದ್ದೇವೆ. ಮಂತ್ರಿಗಳೇ ಕನ್ನಡದಲ್ಲಿ ಮಾತನಾಡದಿದ್ದರೆ ಹೇಗೆ? ಅಧಿಕಾರಿಗಳಿಗೂ ನಾವು ಒತ್ತಾಯ ಮಾಡುತ್ತಿದ್ದೇವೆ. ಮಂತ್ರಿಗಳಿಗೂ ಒತ್ತಾಯ ಮಾಡುತ್ತೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:- ಮಾನ್ಯ ಅಧ್ಯಕ್ಷರೇ, ಕನ್ನಡದ ಕಂಪು, ಕನ್ನಡ ಇಂಪು ತಂಪು ಅಂತ ಭಾಷಣ ಮಾಡುತ್ತಾರೆ. ಕನ್ನಡ ಬರುವುದಿಲ್ಲವೆಂದರೆ ಅರ್ಥವೇನು?

ಶ್ರೀ ಖಮರುಲ್ ಇಸ್ಲಾಂ:- ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಸದಸ್ಯರು ಬಹಳ ಇಂಟಲಿಜಂಟ್ ಇದ್ದಾರೆ ಮಾನ್ಯ ಖಮರುಲ್ ಇಸ್ಲಾಂ ಏನು ಹೇಳುತ್ತಿದ್ದಾರೆ ಎಂಬುದು ಅವರಿಗೆ ಗೊತ್ತಾಗಿದೆ. ಈ ಬಿಲ್ ನಮ್ಮ ಹೌಸ್ ಕಮಿಟಿ ಮುಂದೆ ಇದೆ. ತಾವು ಆ ಬಿಲ್‌ನ್ನು ಕಂಪೇರ್ ಮಾಡಿ, ತಾವು ಏನು ಸಲಹೆ ಕೊಡುತ್ತೀರೋ ಕೊಡಿ. ತಾವು ಹೇಳಿದಿರಿ ಕನ್‌ಸ್ಟ್ರಕ್ಷನ್ ಬಗ್ಗೆ ಆ ಬಿಲ್ ಏನು ಇದೆ ಕೇರಳದಲ್ಲಿ ನೀವು ಕಂಪೇರ್ ಮಾಡಿ ನಮ್ಮ ಬಿಲ್ ನಲ್ಲಿ ಟೈಲರಿಂಗ್ ಬಗ್ಗೆ ಕೇರಳದಲ್ಲಿ ಏನು ಕಾಯ್ದೆ ಇದೆ ಅದನ್ನು ಕಂಪೇರ್ ಮಾಡಿ, ನಮ್ಮ ಕೇಂದ್ರ ಸರ್ಕಾರದಲ್ಲಿ ಲೇಬರ್ ಮಿನಿಸ್ಟರ್ಸ್ ಕಾನ್ಫರೆನ್ಸ್ ಆಗಿದೆ, ಆ ಲೇಬರ್ ಮಿನಿಸ್ಟರ್ ಕಾನ್ಫರೆನ್ಸ್‌ನಲ್ಲಿ ಸಾಸಿಬ್‌ಸಿಂಗ್ ವರ್ಮಾ ಏನು ಹೇಳಿದರು ಅಂದರೆ ಕರ್ನಾಟಕದಲ್ಲಿ ಏನು ಕಾಂಪ್ರ ಹೆನ್ಸೀವ್ ಬಿಲ್ ಇದೆ ಈ ಅಸಂಘಟಿತ ವರ್ಗಕ್ಕೆ ಇದು ಒಂದು ಮಹತ್ವದ ಮಾಡಲ್ ಬಿಲ್ ಆಗುತ್ತದೆ ಎಂದು ಇದು ಈಗ ಡ್ರಾಫ್ಟ್ ಬಿಲ್ ರೆಡಿಯಾಗಿದೆ. ಈ ಬಿಲ್ ಅನ್ನು ಈಗ ಹೌಸ್ ಕಮಿಟಿಗೆ ಕೊಟ್ಟಿದ್ದೇವೆ. ತಾವುಗಳು ಆ ಎರಡೂ ಬಿಲ್‌ಗಳನ್ನು ನೋಡಿ ಏನು ಸಲಹೆ ಸೂಚನೆಗಳನ್ನು ಕೊಡುತ್ತೀರೋ ಕೊಡಿ. ಆ ಬಿಲ್ ಈ ಮನೆಗೆ ಬರುತ್ತಿದೆ. ನಾನು ತಮಗೆ ಆಶ್ವಾಸನೆ ಕೊಡುತ್ತಿದ್ದೇನೆ. ಈ ಅಧಿವೇಶನದಲ್ಲಿ ಆ ಬಿಲ್ ಬರುತ್ತಿದೆ. ತಮ್ಮ ಅಭಿಪ್ರಾಯ ಏನು ಇದೆ ಆ ಅಭಿಪ್ರಾಯವನ್ನು ಬಿಲ್‌ನಲ್ಲಿ ಇನ್‌ಕ್ಲೂಡ್ ಮಾಡಲೇಬೇಕು. ಏಕೆಂದರೆ ಎಲ್ಲರಿಗೂ ಕಾಳಜಿ ಇದೆ. ನಿಮಗೂ ಕಾಳಜಿ ಇದೆ. ನಮ್ಮ ಸರ್ಕಾರಕ್ಕೂ ಕಾಳಜಿ ಇದೆ. ಈ ಅಸಂಘಟಿತ ವರ್ಗದವರ ಬಗ್ಗೆ ಇಂಡಿಪೆಂಡೆನ್ಸ್ ಆದ ಮೇಲೆ ಒಂದು ಶಾಸನ ಸಹ ಇಲ್ಲ ನಮ್ಮ ಸರ್ಕಾರ ಈ ವಿಚಾರದಲ್ಲಿ ಬಹಳ ಸೀರಿಯಸ್ ಆಗಿ ಇದೆ.

11.30 ಎ.ಎಂ

ಅಧ್ಯಕ್ಷರು:- ಈ ಪ್ರಶ್ನೆಗೆ ಸಂಬಂಧಪಟ್ಟ ಸಚಿವರು ಮೇಲ್ಮನೆಯಲ್ಲಿದ್ದಾರೆ. ಪ್ರವಾಸೋದ್ಯಮ ಸಚಿವರಿಗೆ ಬದಲಾಗಿ ಮಾನ್ಯ ದೇಶಪಾಂಡೆಯವರು ಹೇಳುತ್ತಾರೆ. ಅವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಸ್ವಲ್ಪ ತಡವಾಗಿ ಬರುತ್ತೇನೆಂದು ಅವರು ಹೇಳಿದ್ದಾರೆ. ಆದ್ದರಿಂದ, ಈ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳೋಣ.